ಬೆಳವಣಿಗೆಗಳೇ ಬೇರೆ. Let us have comprehensive vision ಸಮಗ್ರವಾದ ದೃಷ್ಟಿಯನ್ನು ಇಟ್ಟುಕೊಳ್ಳೋಣ. ತಾವೆಲ್ಲ ಸಹಕಾರ ಕೊಡಿ. ಕೊಡಗಿನವರದ್ದೇ ಒಂದು ಡಿಸ್ಟಿಂಕ್ಷನ್ ಇದೆ. ಅವರು ದೇಶಕ್ಕೋಸ್ಕರ ಹೋರಾಟ ಮಾಡಿದ್ದಾರೆ, ದೊಡ್ಡ ದೊಡ್ಡ ಸೈನಿಕರನ್ನು ಕೊಟ್ಟಿದ್ದಾರೆ. ಆದ್ದರಿಂದ ಒಂದೊಂದು ಭಾಗದಲ್ಲಿಯೂ ವಿಶಿಷ್ಟತೆ ಇದೆ. ಅಂತಹ ನಾಡು ಇದು ಕನ್ನಡ ನಾಡು. ಇದನ್ನು ಹೇಗೆ ಬೆಳೆಸಬೇಕು ಏನು ಮಾಡಬೇಕು ಎನ್ನುವುದಕ್ಕೆ ಸಲಹೆ ಕೊಡಿ ತಪ್ಪಾಗಿದ್ದರೆ ತಿಳಿಸಿ, ವಿನಾಃ ಕಾರಣ ಆಧಾರ ರಹಿತವಾದಂತಹ ಜಾತಿ ಆಧಾರದ ಮೇಲೆ ಟೀಕೆ ಮಾಡುವುದು, ಇದನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ, ಹೋದ ವರ್ಷ ನಾನು ಇಲಾಖಾ ವೈಜ್ ಕೊಟ್ಟಿದ್ದೆ. ಈ ಸಾರಿ ಎಲ್ಲಾ problem has been attended to. ಎಜುಕೇಶನ್, ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಅಂತೂ ವಿರೋಧ ಪಕ್ಷದವರು ಸುಸ್ತಾಗಿ ಹೋದರು ಎಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಆಗಲೇ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ನಿಮ್ಮಷ್ಟು ದೀರ್ಘವಾದ ಉತ್ತರ ಕೊಡುವುದಿಲ್ಲ ಇವತ್ತು, 6 ಗಂಟೆಗಳ ಕಾಲ ಉತ್ತರ ಕೊಟ್ಟಿದ್ದೀರಿ. ರೆಕಾರ್ಡ್‌ಬ್ರೇಕ್ ಆಗಿದೆ ಎಂದು ಹೇಳಿದೆ.

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೆ ಅವರು ಅಷ್ಟು ಉತ್ತರ ಕೊಟ್ಟ ಮೇಲೆ, ನಾಗೇಗೌಡರು ಹೇಳಿದ ಮೇಲೆ ಫೈನಾನ್ಸ್ ಮಿನಿಸ್ಟರ್ ಹೇಳಿದ ಮೇಲೆ ನಾನು ಇಷ್ಟೂ ಹೇಳಬಾರದಿತ್ತು. ಮಾಡಿರುವುದೆಲ್ಲಾ ಚೆನ್ನಾಗಿದೆಯಪ್ಪ ನೀವು ಮನೆಗೆ ಹೋಗಿ ಬನ್ನಿ ಎಂದು ಹೇಳಬೇಕಾಗಿತ್ತು. ಆದರೂ ಇನ್ನೂ ಒಂದು ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಕಂಟಿನಿಯಸ್ ಆಗಿ ವಿಧಾನ ಸಭೆಯ ಸಿಟ್ಟಿಂಗ್ಸ್ ನಾವು ಮೊದಲ ಬಾರಿಗೆ ಮಾಡಿದ್ದೇವೆ. ಈ ತರಹ 40 ದಿವಸ 60 ದಿವಸ ಕುಳಿತಿರುವುದು. ಮೊದಲು ಎಲ್ಲಿ ಕುಳಿತುಕೊಳ್ಳುತ್ತಿದ್ದರು. ಮೊದಲು ಒಂದು ವಾರ 10 ದಿವಸಕ್ಕೆ ಮುಗಿಯುತ್ತಿತ್ತು. ಆ ವಾರ ಹತ್ತು ದಿನಗಳಲ್ಲಿ 7 ದಿನ ನಿಮ್ಮ ಧರಣಿ, 3 ದಿವಸ ವಾಕ್ ಔಟ್ ನಡೆಯುತ್ತಿತ್ತು. ಅದು ಬೇಡ ಎಂದು ನಾನು ಹೇಳುವುದು. ಇನ್ನು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮತ್ತೆ ಹಲವಾರು ತಿಂಗಳುಗಳ ನಂತರ ನಾವು ಸೇರೋಣ. ಕೆಲವು ವಿಷಯಗಳು ಅಷ್ಟು ಹೊತ್ತಿಗೆ ಪ್ರಸ್ತಾಪಕ್ಕೆ ಬರುತ್ತದೆ. ಆದ್ದರಿಂದ ತಮ್ಮೆಲ್ಲರಿಗೂ ಅಧ್ಯಕ್ಷರಿಗೂ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ..

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು.....

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಒಂದು ಪ್ರಕಟಣೆ ಇದೆ. ಅದನ್ನು ಹೇಳಬಿಡುತ್ತೇನೆ.

ಮುಖ್ಯಮಂತ್ರಿಗಳ ಹೇಳಿಕೆ

ಕರ್ನಾಟಕದಲ್ಲಿ ಡೀಸೆಲ್ ದರದ ಬಗ್ಗೆ

ಭಾರತ ಸರ್ಕಾರವು ವಿವಿಧ ರಾಜ್ಯಗಳಲ್ಲಿ ಡೀಸಲ್‌ನ ಚಿಲ್ಲರೆ ಬೆಲೆಯನ್ನು ದಿನಾಂಕ

2.9.1997 ರಂದು ಪರಿಷ್ಕರಿಸಿದೆ. ಇದರನ್ವಯ ಕರ್ನಾಟಕದಲ್ಲಿ ಡೀಸಲ್‌ನ ಬೆಲೆ ಅತ್ಯಧಿಕಾವಾಗಿದ್ದು, ಅದು ಲೀಟರ್‌ಗೆ 9.33 ರೂಗಳಿಂದ 12.49 ರೂ.ಗಳಿಗೆ ಏರಿಕೆಯಾಯಿತು. ಇದಾದ ನಂತರ ಭಾರತ ಸರ್ಕಾರವು ಎಲ್ಲಾ ರಾಜ್ಯಗಳಲ್ಲಿ ಡೀಸಲ್‌ನ ಬೆಲೆಯನ್ನು ಕಡಿಮೆ ಮಾಡಿತು. ಹಾಲಿ ಬೆಂಗಳೂರಿನಲ್ಲಿ ಒಂದು ಲೀಟರ್ ಡೀಸಲ್‌ನ ಬೆಲೆ 12.16 ರೂಪಾಯಿಯಾಗಿದೆ. ಆದರೂ, ನೆರೆಯ ಹೊಸೂರಿಗೆ (ತಮಿಳು ನಾಡು) ಹೋಲಿಸಿದರೆ ಡೀಸಲ್‌ನ ಬೆಲೆ ಬೆಂಗಳೂರಿನಲ್ಲಿ 85 ಪೈಸೆಯಷ್ಟು ಹೆಚ್ಚಾಗಿದೆ. ಇದಕ್ಕೆ ಕರ್ನಾಟಕ ರಾಜ್ಯವು ಡೀಸಲ್‌ನ ಮೇಲೆ ಮಾರಾಟ ತೆರಿಗೆಯ ಜೊತೆಗೆ ವಿಧಿಸಿರುವ ವಹಿವಾಟು ಮತ್ತು ಖರೀದಿ ತೆರಿಗೆ ಹಾಗೂ ಕಚ್ಚಾ ತೈಲದ ಮೇಲೆ ಹಾಕಿರುವ ಪ್ರವೇಶ ತೆರಿಗೆ ಕಾರಣವೆಂದು ಭಾರತ ಸರ್ಕಾರವು ಕಾರಣ ನೀಡುತ್ತಿದೆ. ರಾಜ್ಯ ಸರ್ಕಾರದ ಈ ತೆರಿಗೆಗಳನ್ನು ಡೀಸೆಲನ ಬೆಲೆಗೆ ಸರ್‌ಚಾರ್ಜ್ ಎಂದು ಸೇರಿಸಲಾಗಿದೆ. ಈವರೆಗೆ ಈ ತೆರಿಗೆಗಳನ್ನು ತೈಲ ಕಂಪನಿಗಳು ಭರಿಸುತ್ತಿದ್ದವು. ಈಗ ಇದನ್ನು ಗ್ರಾಹಕರಿಗೆ ವರ್ಗಾಹಿಸಲಾಗಿದೆ. ಡೀಸೆಲ್ ಮೇಲಿನ ಮಾರಾಟ ಮತ್ತು ವಹಿವಾಟು ತೆರಿಗೆ ಹಾಗೂ ಕಚ್ಚಾ ತೈಲದ ಮೇಲಿನ ಪ್ರವೇಶ ತೆರಿಗೆಯ ಹೊರೆಯನ್ನು ಕರ್ನಾಟಕದ ಗ್ರಾಹಕರ ಮೇಲೆ ವರ್ಗಾಹಿಸಿರುವುದನ್ನು ಭಾರತ ಸರ್ಕಾರವು ಸಮರ್ಥಿಸಿಕೊಳ್ಳುತ್ತಿಲ್ಲ. ಕರ್ನಾಟಕ ಸರ್ಕಾರವು ಈ ವಿಷಯವನ್ನು ಭಾರತ ಸರ್ಕಾರ ಮತ್ತು ತೈಲ ಕಂಪನಿಗಳ ಗಮನಕ್ಕೆ ತಂದಿದೆ. ಅಲ್ಲದೆ ರಾಜ್ಯ ಸರ್‌ಚಾರ್ಜ್ ಅನ್ನು ಕಡಿಮೆ ಮಾಡಬೇಕೆಂದು ಭಾರತ ಸರ್ಕಾರಕ್ಕೆ ನಾವು ವಿನಂತಿ ಮಾಡಿಕೊಂಡಿದ್ದೇವೆ. ಆದರೆ ಭಾರತ ಸರ್ಕಾರವು ಈವರೆಗೆ ಇದಕ್ಕೆ ತನ್ನ ಒಪ್ಪಿಗೆಯನ್ನು ನೀಡಿರುವುದಿಲ್ಲ. ರಾಜ್ಯದ ಒಳಕ್ಕೆ ಪ್ರವೇಶಿಸುವ ಹಾಗೂ ಹೊರಗೆ ಸಾಗಣೆಯಾಗುವ ವಸ್ತುಗಳ ಬೆಲೆಯ ಮೇಲೆ ಡೀಸಲ್‌ನ ಬೆಲೆಯ ಪ್ರಭಾವ ಇರುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ಡೀಸಲ್ ಮೇಲಿನ ಖರೀದಿ ತೆರಿಗೆಯನ್ನು ಶೇಕಡಾ 20 ರಿಂದ ಶೇಕಡಾ 4ಕ್ಕೆ ಮತ್ತು ವಹಿವಾಟು ತೆರಿಗೆಯನ್ನು ಶೇಕಡಾ 3 ರಿಂದ 1 ಕ್ಕೆ ಇಳಿಸುವ ಹಾಗೂ ಡೀಸಲ್‌ನ ಮೇಲಿನ ಶೇಕಡಾ 2 ರಷ್ಟು ಪ್ರವೇಶ ತೆರಿಗೆಯನ್ನು ಕೈಬಿಡುವ ನಿರ್ಧಾರ ತೆಗೆದುಕೊಂಡಿದೆ. ಇದು ದಿನಾಂಕ 15.5.98ರ ಮಧ್ಯರಾತ್ರಿಯಿಂದ ಜಾರಿಗೆ ಬರುತ್ತದೆ. ಈ ತೆರಿಗೆ ಇಳಿಕೆಯ ಪರಿಣಾಮದಿಂದ ರಾಜ್ಯದಲ್ಲಿನ ಡೀಸಲ್‌ನ ಚಿಲ್ಲರೆ ಬೆಲೆಯು ಪ್ರತಿ ಲೀಟರ್‌ಗೆ ಸುಮಾರು 48 ರಿಂದ 50 ಪೈಸೆಯಷ್ಟು ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಈ ತೆರಿಗೆ ಇಳಿಕೆಯಿಂದ ರಾಜ್ಯ ಸರ್ಕಾರದ ಆದಾಯಕ್ಕೆ ಸುಮಾರು 200 ಕೋಟಿ ರೂಪಾಯಿಗಳು ಕೊರತೆಯಾಗುವ ಸಂಭವವಿದೆ. ನೆರೆಹೊರೆಯ ರಾಜ್ಯಗಳಿಗೆ ಹರಿದು ಹೋಗುತ್ತಿದ್ದ ವ್ಯಾಪಾರವನ್ನು ಪ್ರತಿಬಂಧಿಸುವ ಮೂಲಕ ನಾವು ಸುಮಾರು 60 ರಿಂದ 70 ಕೋಟಿ ರೂಪಾಯಿಗಳನ್ನು ಸಂಗ್ರಹಿಸಬಹುದಾಗಿದೆ. ಸಾಗಣೆ ಮತ್ತು ಕೃಷಿ ವಲಯದ ಗ್ರಾಹಕರ ಮೇಲಿನ ಹೊರೆಯನ್ನು ಇಳಿಸುವ ಸಲುವಾಗಿ ರಾಜ್ಯ ಸರ್ಕಾರವು ಈ ತೆರಿಗೆಗಳನ್ನು ಕಡಿಮೆ ಮಾಡುವ ನಿರ್ಧಾರ ಕೈಗೊಂಡಿದೆ. ಇದು ದಿನಾಂಕ 15.5.1998ರ ಮಧ್ಯರಾತ್ರಿಯಿಂದ ಜಾರಿಗೆ ಬರುತ್ತದೆ. ಇದಕ್ಕೆ ಸಂಬಂಧಿಸಿದ ಅಗತ್ಯ ಅಧಿಸೂಚನೆಯನ್ನು ಭಾರತ ಸರ್ಕಾರವು ಹೊರಡಿಸಲಿದೆ.